ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಸಭಾಧ್ಯಕ್ಷರುಗಳು

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 10/03/2020

# ವಿಧಾನಸಭೆ ಮೊಗಸಾಲೆಗೂ ಪತ್ರಕರ್ತರಿಗೆ ನಿರ್ಬಂಧ!

## ಸ್ಪೀಕರ್ ಮೌಖಿಕ ಆದೇಶ, ತೀವ್ರ ವಿರೋಧ, ನಂತರ ವಾಪಸ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಧಾನಸಭೆ ಕಲಾಪದ ಚಿತ್ರೀಕರಣಕ್ಕೆ, ಶಾಸಕರ ಭವನ ಪ್ರವೇಶಕ್ಕೆ ಮಾಧ್ಯಮಗಳ ಮೇಲೆ ನಿರ್ಬಂಧ ಹೇರಿದ ಬಳಿಕ ವಿಧಾನಸಭೆಯ ಆಡಳಿತ ಮತ್ತು ಪ್ರತಿಪಕ್ಷದ ಮೊಗಸಾಲೆಯಲ್ಲಿ ಮಾಧ್ಯಮದವರಿಗೆ ನಿರ್ಬಂಧ ಹೇರುವುದಕ್ಕೆ ಸಚಿವಾಲಯ ಮುಂದಾಗಿ ನಂತರ ಹಿಂದೆ ಸರಿದ ಪ್ರಸಂಗ ನಡೆದಿದೆ.



ವಿಧಾನಸಭೆಗೆ ಟೀವಿ ಕ್ಯಾಮೆರಾಗಳಿಗೆ ನಿರ್ಬಂಧ ಬಳಿಕ ಮತ್ತೊಂದು ಕಠಿಣ ಕ್ರಮ

ಸೋಮವಾರ ಎಂದಿನಂತೆ ಪತ್ರಕರ್ತರು ಆಡಳಿತ ಮತ್ತು ಪ್ರತಿಪಕ್ಷದ ಮೊಗಸಾಲೆಗೆ ತೆರಳಿದ ವೇಳೆ ಮಾರ್ಷಲ್‌ಗಳು ಅಡ್ಡಿಪಡಿಸಿದರು. ಸಭಾಧ್ಯಕ್ಷರು ಮೌಖಿಕವಾಗಿ ಆದೇಶ ಹೊರಡಿಸಿದ್ದರು ಎಂದು ಹೇಳಲಾಗಿದೆ. ಮೊಗಸಾಲೆಯಲ್ಲಿನ ಕ್ಯಾಂಟೀನ್‌ಗೆ ಮಾತ್ರ ಪತ್ರಕರ್ತರಿಗೆ ಪ್ರವೇಶಿಸಲು ಅನುಮತಿ ನೀಡಲಾಗಿದೆ. ಅಲ್ಲಿ ತಿಂಡಿ, ಊಟ ಬೇಗ ಮುಗಿಸಿ ಅಲ್ಲಿಂದ ಪತ್ರಕರ್ತರನ್ನು ಕಳುಹಿಸಲು ಮಾರ್ಷಲ್‌ಗಳಿಗೆ ತಿಳಿಸಲಾಗಿತ್ತು. ಇದಕ್ಕೆ ಪತ್ರಕರ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಪತ್ರಕರ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಮಾಧ್ಯಮ ನಿರ್ಬಂಧ ತೆರವುಗೊಳಿಸಲಾಯಿತು. ಎಂದಿನಂತೆ ಮೊಗಸಾಲೆ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಯಿತು. ಶಾಸಕರ ಆಪ್ತಕಾರ್ಯದರ್ಶಿಗಳಿಗೆ ಮಾತ್ರ ಮೊಗಸಾಲೆಗಳಿಗೆ ನಿಷೇಧಿಸಲಾಗಿದೆ ಎಂಬ ಮಾಹಿತಿ ನೀಡಲಾಯಿತು. ಅಲ್ಲದೇ, ಆ ಬಗ್ಗೆ ಸೂಚನಾ ಫಲಕ ಸಹ ಹಾಕಲಾಯಿತು. ಶಾಸಕರ ಆಪ್ತಕಾರ್ಯದರ್ಶಿಗಳು ಮೊಗಸಾಲೆಗಳಿಗೆ ಬಂದು ಕುಳಿತುಕೊಳ್ಳುತ್ತಿದ್ದ ಕಾರಣ ಸ್ಥಳದ ಅಭಾವ ಎದುರಾಗುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ವಿಧಾನಸಭೆಯ ಸಚಿವಾಲಯ ಸಿಬ್ಬಂದಿ ಸ್ಪಷ್ಟನೆ ನೀಡಿದ್ದಾರೆ.